ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಲ್ಲಿಸಿದೆ:

ವಿಷಯ: ಬಿಲ್ಲಿನ ಮೊತ್ತವನ್ನು ಪಾವತಿಸಲು ಹೆಚ್ಚುವರಿ ಭದ್ರತಾ ಠೇವಣಿಯನ್ನು ಬಿಲ್ಲಿನಲ್ಲಿ ಕಟಾವಣೆ ಮಾಡುವ ಬಗ್ಗೆ.

ಉಲ್ಲೇಖ: 1. ಮುಆ/ಪಿಆರ್/216/2024–25, ದಿನಾಂಕ: 13–11–2024.
2. ಈ ಕಛೇರಿಯಿಂದ ಗುತ್ತಿಗೆದಾರರಿಗೆ ನೀಡಿರುವ ಪತ್ರ ದಿನಾಂಕ: 01–07–2025.
3. ಗುತ್ತಿಗೆದಾರರ ಮನವಿ ರವರ ಪತ್ರ ದಿನಾಂಕ: 02–07–2025.

* * * * *

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, ಉಲ್ಲೇಖ (1) ರ ಆದೇಶದಂತೆ ಗುತ್ತಿಗೆದಾರರಾದ ಶ್ರೀ. ಶಿವರಾಜು ಕೆ. ಎಂ ರವರಿಗೆ ಈ ಕೆಳಕಂಡ ವಿವರದಂತೆ 1ನೇ ಮತ್ತು ಅಂತಿಮ ಬಿಲ್ಲಿನ ಮೊತ್ತವನ್ನು ಪಾವತಿಸುವ ಸಂಬಂಧ ಕಾರ್ಯಾದೇಶ ಮೊತ್ತಕ್ಕೆ ಶೇ. 10% ರಷ್ಟು ಹೆಚ್ಚುವರಿ ಭದ್ರತಾ ಠೇವಣಿಯನ್ನು 1 ವರ್ಷ ಅವಧಿಗೆ ಚಾಲ್ತಿ ಇರುವಂತೆ **FDR/ Pay Order/ Bank Guarantee in favour of The Executive Engineer, Byatarayanapura Division, BBMP, Bengaluru, valid for** ಮುಖಾಂತರ ಈ ಕಛೇರಿಗೆ ಸಲ್ಲಿಸಲು ಉಲ್ಲೇಖ (2) ರ ಈ ಕಛೇರಿ ಪತ್ರದ ಮುಖೇತ ಸೂಚಿಸಲಾಗಿರುತ್ತದೆ.

ಕ್ರ. ಸಂ	ಜಾಬ್ ಸಂಖ್ಯೆ	ಕಾಮಗಾರಿ ಹೆಸರು ಮತ್ತು ಜಾಬ್ ಸಂಖ್ಯೆ	ಕಾರ್ಯಾದೇಶ ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ)	ಬಿಲ್ಲಿನ ಮೊತ್ತ ರೂ. (ಜಿ.ಎಸ್.ಟಿ. ಹೊರತುಪಡಿಸಿ)	ಸಲ್ಲಿಸಬೇಕಾದ ಶೇ. 10% ರಷ್ಟು ಭದ್ರತಾ ಠೇವಣಿ ಮೊತ್ತ
1	014–23–000013	Improvements to footpaths in Ward No. 14 (Vidyaranyapura)	20,06,065.87	1st & Final bill amount **Rs. 20,60,065.00**	**2,00,607.00**

ಮುಂದುವರೆದಂತೆ, ಶ್ರೀ. ಶಿವರಾಜು ಕೆ. ಎಂ ರವರು ದಿನಾಂಕ: 02–07–2025 ರಂದು ಉಲ್ಲೇಖ (3) ರಂತೆ ಈ ಕಛೇರಿ ಪತ್ರಕ್ಕೆ ಈ ಕೆಳಕಂಡಂತೆ ಮನವಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವ 1ನೇ ಮತ್ತು ಅಂತಿಮ ಬಿಲ್ಲಿನ ಮೊತ್ತದ ಪಾವತಿಗಾಗಿ ಉಲ್ಲೇಖ (1) ರ ಆದೇಶದಂತೆ ಕಾರ್ಯಾದೇಶ ಮೊತ್ತಕ್ಕೆ ಶೇ. 10% ರಷ್ಟು ಭದ್ರತಾ ಠೇವಣಿಯನ್ನು ಪಾವತಿಸಬೇಕಾಗಿರುತ್ತದೆ.

ಆದರೆ, 1ನೇ ಮತ್ತು ಅಂತಿಮ ಬಿಲ್ಲಿನಲ್ಲಿ ಪಾವತಿಗೆ ಬಾಕಿ ಇರುವ ಮೊತ್ತದಲ್ಲೇ ಶೇ. 10% ರಷ್ಟು ಹೆಚ್ಚುವರಿ ಭದ್ರತಾ ಠೇವಣಿ ಮೊತ್ತವನ್ನು ಕಟಾಯಿಸಿ, ಉಳಿಕೆ ಮೊತ್ತವನ್ನು ನಿವ್ವಳ ಮೊತ್ತವನ್ನು ಪಾವತಿಸುವಂತೆ ಗುತ್ತಿಗೆದಾರರು ಕೋರಿರುತ್ತಾರೆ.

ಪು.ತಿ.ನೋ

ದಿನಾಂಕ: 02–07–2025.

ರವರಿಗೆ,
ಕಾರ್ಯಪಾಲಕ ಅಭಿಯಂತರರು,
ಬ್ಯಾಟರಾಯನಪುರ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು–560092.

ಯಿಂದ,
ಶ್ರೀ. ಶಿವರಾಜು ಕೆ. ಎಂ,
ನಂ. 16, 16ನೇ ಅಡ್ಡರಸ್ತೆ, ಕೆ.ಪಿ.ಅಗ್ರಹಾರ,
ಭುವನೇಶ್ವರಿನಗರ, ಮಾಗಡಿ ರಸ್ತೆ, ಬೆಂ–23.

ಮಾನ್ಯರೇ,

ವಿಷಯ: ಕಾಮಗಾರಿ ಬಿಲ್ಲಿನ ಮೊತ್ತವನ್ನು ಪಾವತಿಸಲು ಹೆಚ್ಚುವರಿ ಭದ್ರತಾ ಠೇವಣಿಯನ್ನು ಬಿಲ್ಲಿನ ಮೊತ್ತದಲ್ಲಿಯೇ ಕಟಾಯಿಸಿ, ಬಾಕಿ ಮೊತ್ತವನ್ನು ಪಾವತಿಸಲು ಕೋರಿ ಮನವಿ.

ಉಲ್ಲೇಖ: ತಮ್ಮ ಕಛೇರಿ ಪತ್ರ ದಿನಾಂಕ: 01–07–2025.

* * * * *

ಈ ಕೆಳಗೆ ಸಹಿ ಮಾಡಿರುವ ಶಿವರಾಜು ಕೆ ಎಂ, ಗುತ್ತಿಗೆದಾರನಾದ ನಾನು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಾನು ಬ್ಯಾಟರಾಯನಪುರ ವಿಭಾಗದ ವಾರ್ಡ್ ಸಂಖ್ಯೆ: 14 ವಿದ್ಯಾರಣ್ಯಪುರ ವಾರ್ಡಿನಲ್ಲಿ ಕಾಮಗಾರಿಯನ್ನು ಟೆಂಡರ್ ಮುಖಾಂತರ ಪಡೆದು ಪೂರ್ಣಗೊಳಿಸಿ, ಬಿಲ್ಲನ್ನು ಪಾವತಿಗಾಗಿ ಸಮುಚಿತ ಮಾರ್ಗದಲ್ಲಿ ಸಲ್ಲಿಸಿರುತ್ತೇನೆ.

ಪ್ರಸ್ತುತ ಸದರಿ ಬಿಲ್ಲು ಪಾವತಿಗೆ ಅರ್ಹವಿದ್ದು, ಹೆಚ್ಚುವರಿ ಭದ್ರತಾ ಠೇವಣಿ ರೂ. 2,00,607.00 ಗಳಲ್ಲಿ ಈಗಾಗಲೇ ಬಿಲ್ಲಿನಲ್ಲಿ ಕಟಾವಣೆ ಮಾಡಿರುವ ರೂ. 1,18,358.00 ಗಳ ಭದ್ರತಾ ಠೇವಣಿ ಮೊತ್ತವನ್ನು ಬಿಟ್ಟು ಉಳಿದ ಮೊತ್ತ ರೂ. 82,249.00 ಗಳನ್ನು ಪಾವತಿಸುವಂತೆ ಉಲ್ಲೇಖದ ಪತ್ರದಲ್ಲಿ ಸೂಚಿಸಿರುತ್ತೀರಿ.

ಆದರೆ ನನಗೆ ಆರ್ಥಿಕ ತೊಂದರೆ ಇರುವುದರಿಂದ, ನೀವು ಸೂಚಿಸಿರುವ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತ ರೂ. 82,249.00 ಗಳನ್ನು ಪಾವತಿಸಲು ಸಾಧ್ಯವಿರುವುದಿಲ್ಲ. ಆದ್ದರಿಂದ ಸದರಿ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತವನ್ನು ನನಗೆ ಪಾವತಿ ಮಾಡಬೇಕಾದ ಬಿಲ್ಲಿನ ಮೊತ್ತದಲ್ಲಿಯೇ ಕಟಾವಣೆ ಮಾಡಿ ಉಳಿಕೆ ಮೊತ್ತವನ್ನು ನನ್ನ ಖಾತೆಗೆ ಪಾವತಿಸ ಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಕಾಮಗಾರಿ ವಿವರ:

ಕ್ರ. ಸಂ	ಜಾಬ್ ಸಂಖ್ಯೆ	ಕಾಮಗಾರಿ ಹೆಸರು ಮತ್ತು ಜಾಬ್ ಸಂಖ್ಯೆ	ಕಾರ್ಯಾದೇಶ ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ)	ಬಿಲ್ಲಿನ ಮೊತ್ತ ರೂ. (ಜಿ.ಎಸ್.ಟಿ. ಹೊರತುಪಡಿಸಿ)
1	014-23-000013	Improvements to footpaths in Ward No. 14 (Vidyaranyapura)	**20,06,065.87**	**Rs. 20,06,065.00** CBR No: 24-000929 Dt: 19-Jun-2023

ವಂದನೆಗಳೊಂದಿಗೆ,

K.M. ಶಿವರಾಜು

ತಮ್ಮ ವಿಶ್ವಾಸಿ

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು-560092

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಬ್ಯಾಟರಾಯನಪುರ ವಿಭಾಗ, ನಂ. 2152/20, ಡಿಫೆನ್ಸ್ ಕಾಲೋನಿ,
ಬಿ.ಡಬ್ಲ್ಯು.ಎಸ್.ಎಸ್.ಬಿ.ಟ್ಯಾಂಕ್ ರಸ್ತೆ, ಸಹಕಾರನಗರ, ಬೆಂಗಳೂರು-560092.

ಸಂ: ಬೃಬೆಂಮಪಾ/ಕಾ.ಪಾ.ಅ/ಬ್ಯಾ.ಪು/ಪಿಆರ್/ /2025-26 ದಿನಾಂಕ: 01-07-2025

ರವರಿಗೆ,
ಶ್ರೀ. ಶಿವರಾಜು ಕೆ. ಎಂ,
ನಂ. 16, 16ನೇ ಅಡ್ಡರಸ್ತೆ, ಕೆ.ಪಿ.ಅಗ್ರಹಾರ,
ಭುವನೇಶ್ವರಿನಗರ, ಮಾಗಡಿ ರಸ್ತೆ, ಬೆಂ-23.

ಮಾನ್ಯರೇ,

ವಿಷಯ: ಕಾಮಗಾರಿ ಬಿಲ್ಲಿನ ಮೊತ್ತವನ್ನು ಪಾವತಿಸಲು ಹೆಚ್ಚುವರಿ ಭದ್ರತಾ ಠೇವಣಿಯನ್ನು ಪಾವತಿಸುವ ಬಗ್ಗೆ.

ಉಲ್ಲೇಖ: 1. ಮುಆ/ಪಿಆರ್/216/2024-25, ದಿನಾಂಕ: 13-11-2024.
2. ಮುಆ/ಪಿಆರ್/216/2024-25, ದಿನಾಂಕ: 21-12-2024.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದಂತೆ ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ ತಾವು ನಿರ್ವಹಿಸಿರುವ ಈ ಕೆಳಕಂಡ ಕಾಮಗಾರಿಯ ಬಿಲ್ಲಿನ ಮೊತ್ತವನ್ನು ಪಾವತಿಸುವ ಸಂಬಂಧ ಹೆಚ್ಚುವರಿ ಭದ್ರತಾ ಠೇವಣಿಯನ್ನು **1 ವರ್ಷ ಅವಧಿಗೆ ಚಾಲ್ತಿ ಇರುವಂತೆ FDR/ Pay Order/ Bank Guarantee in favour of The Executive Engineer, Byatarayanapura Division, BBMP, Bengaluru, valid for** ಮುಖಾಂತರ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಕ್ರ. ಸಂ	ಜಾಬ್ ಸಂಖ್ಯೆ	ಕಾಮಗಾರಿ ಹೆಸರು ಮತ್ತು ಜಾಬ್ ಸಂಖ್ಯೆ	ಕಾರ್ಯಾದೇಶ ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ)	ಬಿಲ್ಲಿನ ಮೊತ್ತ ರೂ. (ಜಿ.ಎಸ್.ಟಿ. ಹೊರತುಪಡಿಸಿ)	ಸಲ್ಲಿಸಬೇಕಾದ ಶೇ. 10% ರಷ್ಟು ಭದ್ರತಾ ಠೇವಣಿ ಮೊತ್ತ
1	014-23-000013	Improvements to footpaths in Ward No. 14 (Vidyaranyapura)	**20,06,065.87**	**Rs. 20,06,065.00** CBR No: 24-000929 Dt: 19-Jun-2023	**2,00,607.00**
ಈಗಾಗಲೇ ಬಿಲ್ಲಿನ ಮೊತ್ತದಲ್ಲಿ ರೂ. 1,18,358.00 ಗಳ ಭದ್ರತಾ ಠೇವಣಿ ಮೊತ್ತವನ್ನು ಕಟಾವಣೆ ಮಾಡಲಾಗಿರುತ್ತದೆ. **ಉಳಿದ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತ ರೂ. 82,249.00 ಗಳನ್ನು ಪಾವತಿಸಬೇಕಾಗಿರುತ್ತದೆ.**					

ಕಾಮಗಾರಿಯ ಮೊತ್ತವನ್ನು ಪಾವತಿಸುವ ಸಂಬಂಧ **ಹೆಚ್ಚುವರಿ ಭದ್ರತಾ ಠೇವಣಿ ಮೊತ್ತ ರೂ. 82,249.00 ಗಳನ್ನು FDR/ Pay Order/ Bank Guarantee** ಮುಖಾಂತರ ಈ ಕಛೇರಿಗೆ ಸಲ್ಲಿಸುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ